

ಕಾರಣಿಕ ನುಡಿಯ ಕ್ಷಣಗಣನೆ

# ಕಾರಣಿಕ ನುಡಿಯ ಮೈಲಾರ ಜಾತ್ರೆ

■ ಚಿತ್ರ- ಲೇಖನ: ಎಸ್.ನಿಂಗರಾಜ್

ರಾಜ್ಯದಲ್ಲಿ ನಡೆಯುವ ಅನೇಕ ಜಾತ್ರೆಗಳ ಪೈಕಿ ‘ಗಂಡು ದೇವರ’ ಜಾತ್ರೆಗಳಲ್ಲಿ ಅತ್ಯಂತ ಹೆಚ್ಚು ಜನರನ್ನು ಆಕರ್ಷಿಸುವ ಜಾತ್ರೆ ಮೈಲಾರಲಿಂಗೇಶ್ವರ ಜಾತ್ರೆ. ಐತಿಹಾಸಿಕ ಹಿನ್ನಲೆಯ ಕ್ಷೇತ್ರ ಮೈಲಾರದಲ್ಲಿ ನಡೆಯುವ ಈ ಜಾತ್ರೆ ಹಲವು ವಿಶಿಷ್ಟ ಕಾರಣಗಳಿಂದ ಪ್ರತಿವರ್ಷ ದೊಡ್ಡ ಸುದ್ದಿಯಾಗುತ್ತದೆ. ಬಳ್ಳಾರಿ– ಹಾವೇರಿ ಜಿಲ್ಲೆಗಳ ನಡುವೆ ಮೈಲಾರ, ಮಾಲತೇಶ ಎಂಬೆರಡು ಹೆಸರಿನಲ್ಲಿ ಜಾತ್ರೆಗಳು ನಡೆದರೆ; ಹಡಗಲಿ ತಾಲ್ಲೂಕಿನ ಮಣ್ಣು ಮೈಲಾರ ಮತ್ತು ರಾಣೆಬೆನ್ನೂರು ತಾಲ್ಲೂಕಿನ ದೇವರಗುಡ್ಡದಲ್ಲಿಯೂ ಈ ಜಾತ್ರೆಗಳು ನಡೆಯುತ್ತವೆ.

ತುಂಗಭದ್ರಾ ನದಿ ತೀರದಲ್ಲಿರುವ ಮೈಲಾರ ಕ್ಷೇತ್ರದಲ್ಲಿ ರಥ ಸಪ್ತಮಿಯ ದಿನದಿಂದ ಭರತ ಹುಣ್ಣಿಮೆಯ ತನಕ ಏಳು ಕೋಟಿ ಮೈಲಾರ ಲಿಂಗನ ಜಾತ್ರೆ ಅತ್ಯಂತ ಭಕ್ತಿ ಭಾವ, ಸಡಗರ, ಸಂಭ್ರಮದಿಂದ ಆಚರಿಸಲಾಗುತ್ತದೆ. ಏನಿಲ್ಲವೆಂದರೂ 8ರಿಂದ 10 ಲಕ್ಷ ಜನ ಈ ಜಾತ್ರೆಗೆ ಸೇರುತ್ತಾರೆ. ಎತ್ತಿನ ಬಂಡಿ, ತ್ರಿಚಕ್ರ ವಾಹನ, ಲಾರಿ, ಬಸ್ಸು, ಕಾರುಗಳಲ್ಲಿ ಬರುವವರಲ್ಲದೆ, ದೇವರಿಗೆ ಹರಕೆ ಹೊತ್ತುಕೊಂಡು ಬರಿಗಾಲಲ್ಲಿ ನಡೆದು ಬರುವ ಭಕ್ತರೂ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ಈ ಜಾತ್ರೆಯ ಮುಖ್ಯ ಆಕರ್ಷಣೆ ಗ್ವಾರಪ್ಪನಿಂದ (ಗೊರವಪ್ಪನಿಂದ) ಹೊರಡುವ ಒಂದು ‘ಕಾರಣಿಕ ವಾಕ್ಯ’ವನ್ನು ಆಲಿಸುವುದು. ಅದಕ್ಕೆಂದೇ ಇಲ್ಲಿ ಲಕ್ಷಗಟ್ಟಲೆ ಜನರು ಸೇರುತ್ತಾರೆ. ಆ ಒಂದು ಕಾರಣಿಕ ನುಡಿಯ ಸಂದರ್ಭದಲ್ಲಿ ಇಡೀ ಜನಸ್ತೋಮ ಒಂದು ಕ್ಷಣ ಸ್ತಬ್ಧವಾಗುತ್ತದೆ.

ಅದೊಂದು ಧಾರ್ಮಿಕ ಉನ್ಮಾದವೆಂದೇ ಹೇಳಬಹುದು. ಗೊರವ ನುಡಿದ ವಾಕ್ಯವನ್ನು ಸಹಸ್ರಾರು ಜನರ ತಮ್ಮದೇ ರೀತಿಯಲ್ಲಿ ಅರ್ಥೈಸುತ್ತಾರೆ. ಮಳೆ– ಬೆಳೆ– ರಾಜಕೀಯ– ಗೃಹ ಸಮಸ್ಯೆ.. ಹೀಗೆ ಎಲ್ಲದಕ್ಕೂ ಈ ವಾಕ್ಯವನ್ನು ಅನ್ವಯಿಸುತ್ತಾ ಜನರು ಚದುರುತ್ತಾರೆ.



ಹೊತ್ತುತಂದ ಪಾದರಕ್ಷೆಗಳನ್ನು ಇರಿಸಿರುವುದು.

ಮೊದಲೆಲ್ಲ ಎತ್ತಿನ ಗಾಡಿಗಳೇ ಜಾತ್ರೆಯ ಸಂಕೇತವೆಂಬಂತೆ ಕಂಡು ಬಂದರೂ ಈಗ ಯಂತ್ರಯುಗದಲ್ಲಿ ಎತ್ತಿನ ಬಂಡಿಗಳು ಕಡಿಮೆಯಾಗಿ, ಮೋಟಾರ್ ವಾಹನಗಳ ದೊಡ್ಡ ದಂಡೇ ದಾಳಿಯಿಡುತ್ತವೆ. ಈಗಲೂ ಸಂಪ್ರದಾಯಬದ್ಧ ಜನರಿಗೆ ಇದೊಂದು ಅಸಹನೆಯ ವಿಷಯ.

ಈ ಜಾತ್ರೆಗೆ ಕರ್ನಾಟಕವಲ್ಲದೇ ಆಂಧ್ರ, ಮಹಾರಾಷ್ಟ್ರ, ಗೋವಾ ಮೊದಲಾದ ರಾಜ್ಯಗಳಿಂದಲೂ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಈ ಭಕ್ತರಿಗೆ ಮೈಲಾರ ಕ್ಷೇತ್ರ ಭಕ್ತಿ, ಶ್ರದ್ಧೆಯ ಕೇಂದ್ರವಾದರೆ, ಅಧ್ಯಯನಾಸಕ್ತರಿಗೆ ಜನಪದ ಮೂಲವನ್ನು ಹುಡುಕುವ ಕೇಂದ್ರ.

ಮೈಲಾರಲಿಂಗಕ್ಕೆ ತನ್ನದೇ ಆದ ಪೌರಾಣಿಕ ಹಿನ್ನೆಲೆ ಇದೆ. ಮಣಿಕಾಸುರ ಹಾಗೂ ಮಲ್ಲಾಸರೆಂಬ ರಾಕ್ಷಸರ ಉಪಟಳ ಭೂಲೋಕದಲ್ಲಿ ಹೆಚ್ಚಾದಾಗ ಆ ರಾಕ್ಷಸರ ಸಂಹಾರಕ್ಕೆ ಶಿವನು ಕೈಲಾಸದಿಂದ ಭೂಲೋಕಕ್ಕೆ ಬರುತ್ತಾನೆ. ಈ ಕ್ಷೇತ್ರದಲ್ಲಿ ಭೂಲಿಂಗ ರೂಪದಲ್ಲಿ ಹುತ್ತದಲ್ಲಿ ಒಡಮೂಡುವ ಶಿವ, ಮಲ್ಲಾಸುರ ಹಾಗೂ ಮಣಿಕಾಸುರರನ್ನು ಸಂಹಾರ ಮಾಡಿದ. ಆ ಬಳಿಕ ಇಲ್ಲಿ ಈ ಜಾತ್ರೆ ನಡೆಯುತ್ತಿದೆ ಎನ್ನುವುದು ಭಕ್ತರ ಅಚಲ ನಂಬಿಕೆ. ಇತಿಹಾಸಜ್ಞರನ್ನು ಕೇಳಿದರೆ, ಬಹುತೇಕ 11ನೇ ಶತಮಾನದಲ್ಲಿ ಈ ಆಚರಣೆ, ಸಂಪ್ರದಾಯಗಳು ಇದ್ದವು ಎನ್ನುತ್ತಾರೆ. ‘ಜಾತಿ ವ್ಯವಸ್ಥೆ ಬಳಕೆಯಲ್ಲಿ ಬರುವ ಮುನ್ನ ಎಲ್ಲ ಜನರೂ ಮೈಲಾರಲಿಂಗನ ವಕ್ಕಲು ಆಗಿದ್ದವರು’ ಎಂದು ಜಾನಪದ ಅಧ್ಯಯನದಲ್ಲಿ ಹೆಚ್ಚು ಆಸಕ್ತರಾಗಿದ್ದ ದಿವಂಗತ ಎಸ್.ಎಸ್.ಹಿರೇಮಠ್ ಬರೆದಿದ್ದಾರೆ.

ಮೈಲಾರಲಿಂಗನನ್ನು ಕೇವಲ ಕುರುಬ ಸಮುದಾಯಕ್ಕೆ ಸೀಮಿತಗೊಳಿಸದರೆ,